ತೀರ್ಪು ಕೊಟ್ಟಿದ್ದಾರೆ. ಆ ಹಂತ 1-4-91ಕ್ಕೆ ಬರಬಹುದೆಂದು ಅಂದಾಜು ಮಾಡಿದ್ದರಿಂದ ಆ ನೀರನ್ನು ಹಾಯಿಸಲಿಕ್ಕೆ ಆಗಲಿಲ್ಲವೆಂದು.

ಶ್ರೀ ಡಿ.ಬಿ. ಚಂದ್ರೇಗೌಡ : ಆಗ ನೀವು ಇದ್ದೀರೋ ಇಲ್ಲವೋ ಗೊತ್ತಿಲ್ಲ. 2 ಟಿ.ಎಂ.ಸಿ.ಎಫ್.ಟಿಯಷ್ಟು ನೀರನ್ನು ರಿಸರ್ವ್ ಆಗಿ ಇಡುತ್ತಾರೆ. ಏತಕ್ಕೆಂದರೆ, ಕಬ್ಬು ಬೆಳೆಯತಕ್ಕವರಿಗೆ ತೊಂದರೆ ಆಗಬಾರದೆಂದು. ಎಂದು ಟಿ.ಎಂ.ಸಿ.ಎಫ್.ಟಿ. ನೀರಿನ ಬಗ್ಗೆ ಹೇಳುವಾಗ ಈ ವರ್ಷ ಬಂದಿರತಕ್ಕ ಮತ್ತು ಹೋದ ವರ್ಷ ಬಂದಿರತಕಕ್ಕ ನೀರಿನ ಪ್ರಮಾಣವನ್ನು ಹೇಳಿದ್ದೇನೆ. 80 ಸಾವಿರ ಕ್ಯೂಸೆಕ್ಸ್ ನೀರು ಈ ಸಾರಿ ಜಾಸ್ತಿ ಬಂದಿದೆ. ಸುಮಾರು ಏಳೂವರೆ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ಜಾಸ್ತಿಯಿದೆ. ಆ ಏಳೂವರೆ ಟಿ.ಎಂ.ಸಿ.ಎಫ್.ಟಿಯಷ್ಟು ನೀರು ಜಾಸ್ತಿ ಇರುವುದರಿಂದ ನೀವು ಎರಡು ಟಿ.ಎಂ.ಸಿ.ಎಫ್.ಟಿಯಷ್ಟು ನೀರು ಹಾಗೇ ಇಟ್ಟುಕೊಳ್ಳಿ ಉಳಿದಿರತಕ್ಕಂತ ನೀರಿನಲ್ಲಿ ನಮಗೆ ಬೇಕಾಗಿರತಕ್ಕಂಥ 1 ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ಒಂದು ವಾರದವರೆಗೆ ಕೊಡಿ ಎಂದು ಹೇಳಿರುವುದು. ತಾವು ಹೈಕೋರ್ಟ್‌ನ ಆದೇಶ ಏನು ಹೇಳಿದ್ದೀರಿ, ಹೈಕೋರ್ಟ್‌ನ ಆದೇಶದಲ್ಲಿ ಆ ಲೆವಲ್‌ನ ನೀರು ಫಿಕ್ಸ್ ಮಾಡಿದ್ದಾರೆ. ಅದು ಫಿಕ್ಸ್ ಮಾಡುವುದಕ್ಕೆ ಬಹು ಮುಖ್ಯವಾದಂಥ ಕಾರಣ. 2 ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ಈ ಕಬ್ಬು ಒಣಗದೆ ಇರುವ ಹಾಗೆ ರಿಸರ್ವ್ ಇಡಿ ಎಂದು ಹೇಳಿದ್ದಾರೆ. ನಾನು ನಿಮಗೆ ಹೇಳುತ್ತಿದ್ದೇನೆ. ಈ 2 ಟಿ.ಎಂ.ಸಿ.ಎಫ್.ಟಿ.ಯಷ್ಟು ಇಟ್ಟರೂ ಐದೂವರೆ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ಜಾಸ್ತಿ ಇದೆ. ಸಾವಿರಾರು ಎಕರೆಗೆ ನೀರು ಸಿಗದೆ ಬಹಳ ತೊಂದರೆಯಾಗಿದೆ, ಇದಕ್ಕಾಗಿ ಬೆಳಿಗ್ಗೆ ನಾನು ನಿಲುವಳಿ ಸೂಚನೆ ಕಳುಹಿಸಬೇಕಾಗಿತ್ತೇ?

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂಥ ವಿಚಾರವನ್ನು ನಾವು ಪರಿಶೀಲನೆ ಮಾಡುತ್ತೇವೆ. ಮತ್ತು ತೀರ್ಪನ್ನು ನಾನು ನೋಡಿ, ಅದಕ್ಕೆ ಬಾಧಕಬಾರದ ರೀತಿಯಲ್ಲಿ ನಾವು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಪ್ರಕಟಣೆ

ಸದನದ ಕಲಾಪಗಳ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ.

ಉಪಾಧ್ಯಕ್ಷಣೆಯವರು : ಈಗ ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ.

ಒಂಭತ್ತನೆಯ ವಿಧಾನ ಸಭೆಯ ಐದನೆಯ ಅಧಿವೇಶನ ಅವಧಿಯಲ್ಲಿನ ಕಾರ್ಯ ಕಲಾಪಗಳ ಸಂಕ್ಷಿಪ್ತ ವರದಿ ಈ ಕೆಳಕಂಡಂತಿದೆ.

ಮಾರ್ಚ್ 1, 1991ರಂದು ಜಂಟೀ ಅಧಿವೇಶನವನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದೊಂದಿಗೆ ಪ್ರಾರಂಭವಾದ ಈ ಸದನವು 19 ದಿನಗಳ ಕಾರ್ಯಕಲಾಪದ ನಂತರ ಇಂದು ಮುಕ್ತಾಯಗೊಳ್ಳಲಿದೆ.

ಮಾರ್ಚ್ 4, 1991 ರಂದು ಮಾನ್ಯ ಕಂದಾಯ ಮಂತ್ರಿಗಳು ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿಯ ಬಗ್ಗೆ ನೀಡಿದ ಹೇಳಿಕೆಯ ಮೇಲೆ ಎರಡು ದಿನಗಳು ವ್ಯಾಪಕ ಚರ್ಚೆ ನಡೆದು ಈ ಚರ್ಚೆಯಲ್ಲಿ 16 ಮಾನ್ಯ ಸದಸ್ಯರು ಭಾಗವಹಿಸಿದ್ದರು. ಚರ್ಚೆಯ ಅಂತ್ಯದಲ್ಲಿ ಮಾನ್ಯ ಕಂದಾಯ ಸಚಿವರು ಉತ್ತರ ನೀಡಿದರು.

ಮಾರ್ಚ್ 1, 1991ರಂದು ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ಕೃತಜ್ಞತಾ ಪ್ರಸ್ತಾವನೆಯ ಮೇಲೆ ಶ್ರೀಮತಿ ಚಂದ್ರಪ್ರಭಾ ಅರಸುರವರು ಮಾರ್ಚ್ 5, 1991ರಂದು ಪ್ರಾರಂಭಿಸಿದ ಚರ್ಚೆಯಲ್ಲಿ 19 ಮಾನ್ಯ

ಸದಸ್ಯರು ಭಾಗವಹಿಸಿದ್ದರು. 15 ನೇ ಮಾರ್ಚ್ 1991ರಂದು ಈ ಚರ್ಚೆಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರಿಸಿದ ನಂತರ ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

ಪ್ರೊ ಎಂ.ಡಿ. ನಂಜುಂಡಸ್ವಾಮಿಯವರು ಸದರಿ ಪ್ರಸ್ತಾವನೆಗೆ ಮಂಡಿಸಿದ ತಿದ್ದುಪಡಿಯನ್ನು ಸಭೆಯು ತಿರಸ್ಕರಿಸಿತು. ಹಾಗೂ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಮಂಡಿಸಿದ ತಮ್ಮ ತಿದ್ದುಪಡಿಯನ್ನು ಹಿಂದಕ್ಕೆ ಪಡೆದರು.

1991-92ನೇ ಸಾಲಿನ ಆಯವ್ಯಯ ಪತ್ರವನ್ನು ಮಾನ್ಯ ಮುಖ್ಯಮಂತ್ರಿಗಳು 11ನೇ ಮಾರ್ಚ್ 1991ರಂದು ಮಂಡಿಸಿದ್ದರು. 1991-92ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಯಲ್ಲಿ 13 ಸದಸ್ಯರು ಭಾಗವಹಿಸಿದ್ದು ಚರ್ಚೆಯ ಅಂತ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಿದರು.

ಮಾರ್ಚ್ 25, 1991 ರಂದು ವಾಯುದಳದ ವಿಮಾನ ಅಪಘಾತದಲ್ಲಿ ಮೃತರಾದ 28 ಮಂದಿ ವಾಯುದಳ ತರಬೇತಿದಾರರ ಹಾಗೂ ನಾಲ್ವರು ಮಾಜಿ ಸದಸ್ಯರ ಮೃತರ ಗೌರವಾರ್ಥ ಸಂತಾಪವನ್ನು ಸೂಚಿಸಲಾಯಿತು.

ಮೇಲಿನ ಅವಧಿಯಲ್ಲಿ 1814 ಪ್ರಶ್ನೆಗಳನ್ನು ಸ್ವೀಕರಿಸಿದ್ದು ಆ ಪೈಕಿ 2800 ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ 225 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಉಳಿದ 1381 ಚುಕ್ಕೆ ರಹಿತ ಪ್ರಶ್ನೆಗಳಲ್ಲಿ 936 ಪ್ರಶ್ನೆಗಳಿಗೆ ಸರ್ಕಾರ ಒದಗಿಸಿದ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು ಹಾಗೂ ಉಳಿದ 175 ಪ್ರಶ್ನೆಗಳಿಗೆ ಸಂಬಂಧಿಸಿದಂತೆ, 32 ಸೂಚನೆಗಳನ್ನು ಸರ್ಕಾರದಿಂದ ವರದಿ ತರಿಸುವುದಕ್ಕೆ ಹಾಗೂ 7 ಪ್ರಶ್ನೆಗಳನ್ನು ಸದಸ್ಯರಿಂದ ಸ್ಪಷ್ಟೀಕರಣ ಪಡೆಯುವುದಕ್ಕೆ ಕ್ರಮ ತೆಗೆದುಕೊಂಡು ಉಳಿದ 136 ಪ್ರಶ್ನೆಗಳನ್ನು ತಿರಸ್ಕರಿಸಲಾಯಿತು.

ಸ್ವೀಕರಿಸಿದ 2 ಅಲ್ಪ ಕಾಲಾವಧಿ ಪ್ರಶ್ನೆಗಳಲ್ಲಿ ಯಾವ ಪ್ರಶ್ನೆಗಳನ್ನೂ ಅಂಗೀಕರಿಸಲಿಲ್ಲ. ಸದಸ್ಯರುಗಳು ನೀಡಿದ 9ನಿಲುವಳಿ ಸೂಚನೆಗಳಿಗೆ ಅಂಗೀಕಾರವನ್ನು ತಡೆಹಿಡಿಯಲಾಯಿತು.

ನಿಯಮ 68ರ ಮೇರೆಗೆ ಅಲ್ಪಕಾಲಾವಧಿಯಲ್ಲಿ ಚರ್ಚಿಸಲು 1 ಸೂಚನೆಯನ್ನು ಸ್ವೀಕರಿಸಿದ್ದು ಅದನ್ನು ಅನುಮೋದಿಸಿರುವುದಿಲ್ಲ.

ಈ ಅವಧಿಯಲ್ಲಿ ಸದನದಲ್ಲಿ 70 ಕಾಗದ ಪತ್ರಗಳು, 27 ಅರ್ಜಿಗಳು ಮತ್ತು ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 8ನೆಯ ವರದಿಯನ್ನು, ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡು ವರದಿಗಳನ್ನು (7 ಮತ್ತು 8ನೇ) ಅಧೀನ ಶಾಸನ ರಚನಾ ಸಮಿತಿಯ 1 ವರದಿಯನ್ನು ಸರ್ಕಾರಿ ಭರವಸೆಗಳ ಸಮಿತಿಯ 2 ವರದಿಗಳನ್ನು (2 ಮತ್ತು 3ನೇ) ಮತ್ತು ಸಾರ್ವಜನಿಕ ಉದ್ದಿಮೆಗಳ ಎರಡು ವರದಿಗಳನ್ನು (45 ಮತ್ತು 46ನೇ) ಒಪ್ಪಿಸಲಾಯಿತು.

ಗಮನ ಸೆಳೆಯುವ 79 ಸೂಚನೆಗಳನ್ನು ಅಂಗೀಕರಿಸಿ ಆ ಪೈಕಿ 26 ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹೇಳಿಕೆ ನೀಡಿದರು.

ನಿಯಮ 334ರ ಮೇರೆಗೆ 170 ಸೂಚನೆಗಳನ್ನು ಸದನದಲ್ಲಿ ಸರ್ಕಾರದ ಗಮನಕ್ಕೆ ತರಲಾಗಿದ್ದು ಅವುಗಳ ಪೈಕಿ 143ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆಯನ್ನು ನೀಡಿದರು.

ಅರ್ಧಗಂಟೆ ಕಾಲಾವಧಿ ಚರ್ಚೆ ನಡೆಸಲು ಅಂಗೀಕರಿಸಲಾದ 2 ಸೂಚನೆಗಳನ್ನು ಚರ್ಚಿಸಲಾಯಿತು.

ಈ ಅವಧಿಯಲ್ಲಿ ಒಟ್ಟು 18 ವಿಧೇಯಕಗಳನ್ನು ಸದನದಲ್ಲಿ ಮಂಡಿಸಲಾಯಿತು. ಆ ಪೈಕಿ 17 ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಯಿತು.

ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ಸ್ವೀಕರಿಸಿದ ಎರಡು ಸೂಚನೆಗಳು ಪರಿಶೀಲನೆಯಲ್ಲಿವೆ.

ಈ ಅಧಿವೇಶನದಲ್ಲಿ ಸ್ವೀಕರಿಸಿದ 2 ಖಾಸಗಿ ವಿಧೇಯಕಗಳು ಹಾಗೂ ನಿರ್ಣಯಗಳಲ್ಲಿ ಯಾವುದೊಂದನ್ನೂ ಚರ್ಚೆಗೆ ತೆಗೆದುಕೊಳ್ಳಲಾಗಲಿಲ್ಲ.

ಈ ಅಧಿವೇಶನದಲ್ಲಿ 1990ನೇ ಹಿಂದೂ ಉತ್ತರಾಧಿಕಾರಿ (ಕರ್ನಾಟಕ ತಿದ್ದುಪಡಿ) ವಿಧೇಯಕದ ಜಂಟೀ ಪರಿಶೀಲನಾ ಸಮಿತಿಯು ತನ್ನ ವರದಿಯನ್ನು ಸಭೆಗೆ ಸಲ್ಲಿಸಲು ಸೆಪ್ಟಂಬರ್ ತಿಂಗಳವರೆಗೆ ಅವಧಿ ವಿಸ್ತರಿಸಲಾಯಿತು.

ವಿವಿಧ ಸಮಿತಿಗಳಿಗೆ ಸಂಬಂಧಿಸಿದಂತೆ ಚುನಾವಣಾ ಪ್ರಸ್ತಾವಗಳನ್ನು ಮಂಡಿಸಲಾಯಿತು ಹಾಗೂ ಪುನರ್‌ರಚಿತ ಸಮಿತಿಗಳ ಸದಸ್ಯರ ಹೆಸರುಗಳನ್ನು ಪ್ರಕಟಿಸಲಾಯಿತು.

ಸದನದ ಕಾರ್ಯ ಕಲಾಪಗಳಲ್ಲಿ ಸಹಕರಿಸಿದ ಮಂತ್ರಿಮಂಡಲದ ಸದಸ್ಯರಿಗೆ, ಮಾನ್ಯ ಸದಸ್ಯರಿಗೆ ಹಾಗೂ ಪತ್ರಕರ್ತರಿಗೆ ವಂದನೆಗಳು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷರೇ, ಸಭೆಯನ್ನು ಮುಂದೂಡಬೇಡಿ. ನೀರಿನ ಸಮಸ್ಯೆ ವ್ಯಾಪಕವಾಗಿದೆ....

ಶ್ರೀ ಸಿ. ಬೈರೇಗೌಡ : ನೀರಿನ ಬಗ್ಗೆ ಹೇಳಿಕೆ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದರು. ಇನ್ನೂ ಹೇಳಿಕೆ ಕೊಟ್ಟಿಲ್ಲ. ಈ ಬಗ್ಗೆ ಹೇಳಿಕೆಯನ್ನು ಕೊಡಬೇಕು.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಹೇಳಿಕೆಗಾಗಿ ಒತ್ತಾಯಿಸಿದರು)

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಬೆಳಿಗ್ಗೆಯಿಂದ ವಿಧಾನ ಪರಿಷತ್ತಿನಲ್ಲಿ ಇದ್ದಾರೆ. ಆದುದರಿಂದ ಹೇಳಿಕೆ ನೀಡಲಾಗಿಲ್ಲ. ಆದರೂ ಸಹ ನಾವು ಇದರ ಬಗ್ಗೆ ಮಾಹಿತಿಯನ್ನು ಎಲ್ಲಾ ಮಾನ್ಯ ಸದಸ್ಯರಿಗೂ ಒದಗಿಸುತ್ತೇವೆ.

ಉಪಾಧ್ಯಕ್ಷರು : ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ರಾತ್ರಿ 7ಗಂಟೆ 10 ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).